ಗುರುವಾರ, 2 ಆಗಸ್ಟ್ 2018 | ಪುಟಗಳು: 10+4+2 | ಬೆಲೆ: ₹ 5.00
www.vijaykarnataka.com
ಸಂಪುಟ: 18 | ಸಂಚಿಕೆ: 7
VK ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ

Sahyadri College of Engineering & Management
CENTRAL LIBRARY
Adyar, Mangalore - 7



ಪ್ರತಿಪಕ್ಷ ಸಂಘಟನೆ ಕಾರ್ಯಕ್ಕಿಳಿದ ಮಮತಾ: ದೇವೇಗೌಡ ಸಹಿತ ಹಲವರ ಜತೆ ಚರ್ಚೆ P08
ದೇಶದಲ್ಲಿ 277 ನಕಲಿ ಎಂಜಿನಿಯರಿಂಗ್ ಕಾಲೇಜು!: 23 ಕಾಲೇಜುಗಳೊಂದಿಗೆ ರಾಜ್ಯಕ್ಕೆ ನಾಲ್ಕನೇ ಸ್ಥಾನ! P08
ಉಸ್ತುವಾರಿ ನೇಮಕಕ್ಕೆ ಸಿದ್ದರಾಮಯ್ಯ ಗರಂ: ಕಾಂಗ್ರೆಸ್ ಸಚಿವರ ಭೋಜನ ರಾಜಕೀಯ P05

# ದೇಶದಲ್ಲಿ 277 ನಕಲಿ ಎಂಜಿನಿಯರಿಂಗ್ ಕಾಲೇಜು, ರಾಜ್ಯದಲ್ಲಿವೆ 23 ಸಂಸ್ಥೆಗಳು!

**ಹೊಸದಿಲ್ಲಿ:** ಭಾರತದಲ್ಲಿ ಒಟ್ಟು 277 ನಕಲಿ ಎಂಜಿನಿರಿಂಗ್ ಕಾಲೇಜುಗಳಿದ್ದು, ಈ ಪೈಕಿ 23 ಕರ್ನಾಟಕದಲ್ಲಿವೆ ಎಂದು ಲೋಕಸಭೆಗೆ ಸರಕಾರ ಮಾಹಿತಿ ನೀಡಿದೆ.

66 ನಕಲಿ ಕಾಲೇಜುಗಳೊಂದಿಗೆ ದಿಲ್ಲಿ ಅಗ್ರಸ್ಥಾನದಲ್ಲಿದ್ದು, ತೆಲಂಗಾಣ 35 ಕಾಲೇಜುಗಳೊಂದಿಗೆ ಎರಡನೇ ಸ್ಥಾನದಲ್ಲಿದೆ.

ಕೇಂದ್ರ ಮಾನವ ಸಂಪನ್ಮೂಲ ಸಹಾಯಕ ಸಚಿವ ಸತ್ಯಪಾಲ್ ಸಿಂಗ್ ಅವರು ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಈ ಮಾಹಿತಿ ಬಹಿರಂಗಪಡಿಸಿದ್ದಾರೆ.

ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಸಹ 24 ನಕಲಿ ವಿಶ್ವವಿದ್ಯಾಲಯಗಳನ್ನು ಪಟ್ಟಿ ಮಾಡಿದ್ದು, ಈ ಪೈಕಿ ಕರ್ನಾಟಕದ ಬೆಳಗಾವಿ ಜಿಲ್ಲೆಯ ಗೋಕಾಕ್‌ನಲ್ಲಿರುವ 'ಬಡಗಣವಿ ಸರ್ಕಾರ್ ವಿಶ್ವ ಮುಕ್ತ ವಿಶ್ವವಿದ್ಯಾಲಯ ಶೈಕ್ಷಣಿಕ ಸೊಸೈಟಿ' ಸಹ ಸೇರಿದೆ.

ನಕಲಿ ವಿವಿಗಳು ಮತ್ತು ಕಾಲೇಜುಗಳನ್ನು ಮುಚ್ಚಲು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ರಾಜ್ಯ ಸರಕಾರಗಳಿಗೆ ಸೂಚಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.



## ಎಲ್ಲಿ ಎಷ್ಟು?

| | | | |
|---|---|---|---|
| ಪ.ಬಂಗಾಳ: | 27 | ಚಂಡೀಗಢ: | 07 |
| ಉ.ಪ್ರದೇಶ: | 22 | ಪಂಜಾಬ್: | 05 |
| ಹರಿಯಾಣ: | 18 | ಜಾರ್ಖಂಡ್: | 04 |
| ಬಿಹಾರ: | 17 | ರಾಜಸ್ಥಾನ್, | |
| ಮಹಾರಾಷ್ಟ್ರ: | 16 | ಉ.ಖಂಡ್: | 03 |
| ತಮಿಳು ನಾಡು: | 11 | ಗೋವಾ, ಕೇರಳ: | 02 |
| ಗುಜರಾತ್: | 08 | ಒಡಿಶಾ, ಹಿಮಾಚಲ | |
| ಆಂಧ್ರ ಪ್ರದೇಶ: | 07 | ಪ್ರದೇಶ: | 01 |



ರಾಜತಾಂತ್ರಿಕ ಪ್ರಬುದ್ಧತೆಯಿಂದ ಡೋಕ್ಲಾಂ ಬಿಕ್ಕಟ್ಟು ಇತ್ಯರ್ಥ : ಸುಷ್ಮ 9

ಭಾರತದಿಂದ ಪ್ರೇರಣೆ: ತ್ರಿವಳಿ ತಲಾಖ್ ವಿರುದ್ಧ ಪಾಕ್ ಕೌನ್ಸಿಲ್ 9

ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಿಂದ ಹಂಪಿಗೆ ಕೊಕ್ 5

10 ಆರ್‌ಬಿಐ ರೆಪೊದರ ಹೆಚ್ಚಳ: ವಾಹನ, ಗೃಹ ಸಾಲ ತುಟ್ಟಿ

ಮಂಗಳೂರು
ಗುರುವಾರ
2 ಆಗಸ್ಟ್ 2018
ವಿಲಂಬಿ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ ತಿಥಿ : ಪಂಚಮಿ ನಕ್ಷತ್ರ : ಉತ್ತರಾಭಾದ್ರೆ
ಬೆಲೆ ₹ 5.00

ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ HD

ಸಂಪುಟ 40, ಸಂಚಿಕೆ 137, ಪುಟಗಳು 12+4, ಬೆಂಗಳೂರು-ಮಂಗಳೂರು-ಶಿವಮೊಗ್ಗ-ಹುಬ್ಬಳ್ಳಿ | diganthamlr@gmail.com | website: www.hosadigantha.com | REG.No.MNG / 121 / 2018-20 Posted at kodialbail


## ಡೀಮ್ಡ್ ವಿವಿಗಳಲ್ಲಿ ಶೇ.75 ಶುಲ್ಕ

**ಬೆಂಗಳೂರು:** ರಾಜ್ಯದ ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿ ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ಆಯಾ ವಿವಿ ನಿಗದಿಪಡಿಸಿರುವ ಶುಲ್ಕದಲ್ಲಿ ವಿದ್ಯಾರ್ಥಿಗಳಿಂದ ತಾತ್ಕಾಲಿಕವಾಗಿ ಶೇ.75 ಶುಲ್ಕ ಪಡೆಯಲು ಅನುಮತಿ ಕಲ್ಪಿಸಿ ಹೈಕೋರ್ಟ್ ಮಧ್ಯಂತರ ಆದೇಶ ನೀಡಿದೆ.

ಶುಲ್ಕ ನಿಯಂತ್ರಣ ಸಮಿತಿಯ ಕ್ರಮ ಪ್ರಶ್ನಿಸಿ ಮೈಸೂರಿನ ಜೆಎಸ್. ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಆ್ಯಂಡ್ ರಿಸರ್ಚ್ ಯೂನಿವರ್ಸಿಟಿ ಹಾಗೂ ಇತರೆ ನಾಲ್ಕು ಡೀಮ್ಡ್ ವಿವಿಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನಾಯಮೂರ್ತಿ ಎ.ಎಸ್. ಬೋಪಣ್ಣ ಮತ್ತು ನ್ಯಾಯಮೂರ್ತಿ ಮೊಹಮ್ಮದ್ ನವಾಜ್ ಅವರ ವಿಭಾಗೀಯ ಪೀಠ ಈ ಆದೇಶ ನೀಡಿದ್ದು, ವೇಳೆ, ವಿವಿಗಳು ಪಾವತಿಸಿಕೊಳ್ಳುವ ಶೇ.75 ಶುಲ್ಕವು ಅರ್ಜಿಗಳ ಕುರಿತು ನ್ಯಾಯಾಲಯ ಹೊರಡಿಸುವ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ ಎಂದಿದೆ.

ಖಾಸಗಿ ಕಾಲೇಜುಗಳಲ್ಲಿ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶಕ್ಕೆ ಕಳೆದ ಸಾಲಿನಲ್ಲಿ ನಿಗದಿಪಡಿಸಿದ್ದ ಒಟ್ಟು ಶುಲ್ಕದ ಪ್ರಮಾಣವನ್ನು ಕೇವಲ ಶೇ.8ರಷ್ಟು ಹೆಚ್ಚಿಸಿದ್ದ ನಿವೃತ್ತ ನ್ಯಾಯಮೂರ್ತಿ ಶೈಲೇಂದ್ರ ಕುಮಾರ್ ನೇತೃತ್ವದ ಶುಲ್ಕ ನಿಯಂತ್ರಣ ಸಮಿತಿ ರಚಿಸಲಾಗಿತ್ತು. ಸಮಿತಿಯು ಖಾಸಗಿ ವೃತ್ತಿಪರ ಕಾಲೇಜುಗಳಲ್ಲಿನ ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಎಂಜಿನಿಯರ್ ಕೋರ್ಸ್‌ಗಳ ಪ್ರವೇಶ ಶುಲ್ಕವನ್ನು ಕಳೆದ ವರ್ಷದ ಶುಲ್ಕ ಪ್ರಮಾಣಕ್ಕಿಂತ ಶೇ.8 ಹೆಚ್ಚಳ ಮಾಡಿತ್ತು. ಈ ಸಂಬಂಧ ಜೂನ್ 27ರಂದು ಆದೇಶ ಹೊರಡಿಸಲಾಗಿತ್ತು.

ಗುರುವಾರ 2.8.2018
ಬೆಂಗಳೂರು • ಬೆಳಗಾವಿ • ಶಿವಮೊಗ್ಗ • ಹುಬ್ಬಳ್ಳಿ • ಮಂಗಳೂರು • ಕಲಬುರಗಿ
ಸಂಪುಟ 52 • ಸಂಚಿಕೆ 213 • ಪುಟ 12+4 • ಬೆಲೆ ₹5
epaper.kannadaprabha.in

ಇಮ್ರಾನ್ ಪ್ರಮಾಣಕ್ಕೆ ಕ್ರಿಕೆಟಿಗರು, ಬಾಲಿವುಡ್ ಸ್ಟಾರ್‌ಗಳಿಗೆ ಆಹ್ವಾನ 9

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

...adri College of Engineering & Management
CENTRAL LIBRARY
...Mangalore - 7



ನಮ್ಮವರೇ ನನ್ನ ಸ...
ಖುಷಿಪಟ್ಟರು...

ಈ ಬಾಬಾ ಮ...
20 ಕೆಜಿ ಚಿನ್ನ...

ಉತ್ತರಾಖಂಡದ ಹರಿದ್ವಾ...
ಯಾತ್ರೆಯಲ್ಲಿ 25ನೇ ವ...
ಮಕ್ಕರ್. ಆಧ್ಯಾತ್ಮದತ್ತ ಹ...
ಉದ್ಯಮಿಯಿಂದ ವಿಶಿಷ್ಟ...

# ರಾಜ್ಯದಲ್ಲಿ 23 ನಕಲಿ ಬಿಇ ಕಾಲೇಜು

ನವದೆಹಲಿ: ದೇಶದಲ್ಲಿ 277 ನಕಲಿ ಎಂಜಿನಿಯರಿಂಗ್ ಕಾಲೇಜುಗಳಿದ್ದು, ಇದರಲ್ಲಿ ಕರ್ನಾಟಕದ 23 ಕಾಲೇಜುಗಳಿವೆ ಎಂದು ಲೋಕಸಭೆಗೆ ಕೇಂದ್ರ ಸರ್ಕಾರ ಮಾಹಿತಿ ನೀಡಿದೆ. ನಕಲಿ ಬಿಇ ಕಾಲೇಜುಗಳನ್ನು ಹೊಂದಿರುವ ರಾಜ್ಯಗಳ ಪೈಕಿ ದಿಲ್ಲಿ (66) ಮೊದಲ ಸ್ಥಾನದಲ್ಲಿದ್ದು, ತೆಲಂಗಾಣ (35) ಹಾಗೂ ಪಶ್ಚಿಮ ಬಂಗಾಳ (27) ನಂತರದ ಸ್ಥಾನದಲ್ಲಿವೆ. 23 ನಕಲಿ ಕಾಲೇಜು ಇರುವ ಕರ್ನಾಟಕ ರಾಜ್ಯವು ದೇಶದಲ್ಲೇ 4ನೇ ಸ್ಥಾನದಲ್ಲಿದೆ. ಇದೇ ವೇಳೆ ಕೇಂದ್ರ ಸರ್ಕಾರ 24 ನಕಲಿ ವಿಶ್ವವಿದ್ಯಾಲಯಗಳ ಪಟ್ಟಿಯೊಂದನ್ನು ಕೂಡ ಮತ್ತೆ ಪ್ರಕಟಿಸಿದೆ. ವಿವರ 9

# ಕರ್ನಾಟಕದ 23 ಬಿಇ ಕಾಲೇಜು ನಕಲಿ: ಕೇಂದ್ರ

- ನಕಲಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಕರ್ನಾಟಕ ನಂ.4
- ದೇಶದಲ್ಲಿ ಇಂಥ 277 ಖೊಟ್ಟಿ ಶಿಕ್ಷಣ ಸಂಸ್ಥೆಗಳು

ನವದೆಹಲಿ: ದೇಶದಲ್ಲಿ 277 ನಕಲಿ ಎಂಜಿನಿಯರಿಂಗ್ ಕಾಲೇಜುಗಳಿವೆ.. ಇದರಲ್ಲಿ 66 ಕಾಲೇಜುಗಳು ದಿಲ್ಲಿಯಲ್ಲೇ ಇದ್ದು, ಮೊದಲ ಸ್ಥಾನ ಪಡೆದ ಅಪಖ್ಯಾತಿಗೆ ಪಾತ್ರವಾಗಿದೆ. ಲೋಕಸಭೆಗೆ ಕೇಂದ್ರ ಸರ್ಕಾರ ಈ ಮಾಹಿತಿ ನೀಡಿದೆ. ಇನ್ನು 35 ಕಾಲೇಜುಗಳನ್ನು ಹೊಂದಿದ ತೆಲಂಗಾಣ ನಂ.2, 27 ಕಾಲೇಜು ಹೊಂದಿದ ಬಂಗಾಳ 3ನೇ ಸ್ಥಾನ ಪಡೆದಿದೆ. 23 ನಕಲಿ ಎಂಜಿನಿಯರಿಂಗ್ ಕಾಲೇಜುಗಳು ಕರ್ನಾಟಕದಲ್ಲಿದ್ದು 4ನೇ ಸ್ಥಾನ ಪಡೆದಿದ್ದರೆ, 22 ಖೊಟ್ಟಿ ಕಾಲೇಜುಗಳಿರುವ ಉತ್ತರಪ್ರದೇಶ 5ನೇ ಸ್ಥಾನ ಪಡೆದಿದೆ. ಇದೇ ವೇಳೆ ಕೇಂದ್ರ ಸರ್ಕಾರ 24 ನಕಲಿ ವಿಶ್ವವಿದ್ಯಾಲಯಗಳ ಪಟ್ಟಿಯೊಂದನ್ನು ಕೂಡ ಮತ್ತೆ ಪ್ರಕಟಿಸಿದ್ದು, ಈ ಮೊದಲಿನಂತೆ ಬೆಳಗಾವಿ ಜಿಲ್ಲೆ ಗೋಕಾಕದ ಬಡಗಣವಿ ಸರ್ಕಾರ್ ವಿಶ್ವ ಮುಕ್ತ ವಿಶ್ವವಿದ್ಯಾಲಯ ಶಿಕ್ಷಣ ಸಂಸ್ಥೆ ಕೂಡ ಪುನಃ ಸ್ಥಾನ ಪಡೆದಿದೆ. ಈ ಸಂಸ್ಥೆಗಳು ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಮಂಡಳಿಯ ಪರವಾನಗಿ ಪಡೆದಿಲ್ಲ ಹೊಂದಿಲ್ಲ ಎಂದು ಸರ್ಕಾರ ಹೇಳಿದೆ.

ಗುರುವಾರ 2.8.2018
• ಬೆಂಗಳೂರು • ಬೆಳಗಾವಿ • ಶಿವಮೊಗ್ಗ
• ಹುಬ್ಬಳ್ಳಿ • ಮಂಗಳೂರು • ಕಲಬುರಗಿ
ಸಂಪುಟ 52 • ಸಂಚಿಕೆ 213 • ಪುಟ 12+4 • ಬೆಲೆ ₹5
epaper.kannadaprabha.in

ಇಮ್ರಾನ್ ಪ್ರಮಾಣಕ್ಕೆ ಕ್ರಿಕೆಟಿಗರು, ಬಾಲಿವುಡ್ ಸ್ಟಾರ್‌ಗಳಿಗೆ ಆಹ್ವಾನ ↘ 9

ನಮ್ಮವರೇ ನನ್ನ ಸ
ಖುಷಿಪಟ್ಟರು

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

College of Engineering & Management
CENTRAL LIBRARY
Mangalore-7



ಈ ಬಾಬಾ ಮೆ
20 ಕೆಜಿ ಚಿನ್ನ

ಉತ್ತರಾಖಂಡದ ಹರಿದ್ವಾ
ಯಾತ್ರೆಯಲ್ಲಿ 25ನೇ ವ
ಮಕ್ಕರ್. ಅಧ್ಯಾತ್ಮದತ್ತ ಹ
ಉದ್ಯಮಿಯಿಂದ ವಿಶಿಷ್ಟ

# ಡೀಮ್ಡ್ ವಿವಿ ಕೋರ್ಸ್‌ಗೆ ಶೇ.75 ಕಟ್ಟಿ

## ವೈದ್ಯ, ಎಂಜಿನಿಯರಿಂಗ್ ಕೋರ್ಸ್‌ಗೆ ಸರ್ಕಾರಿ ಸಮಿತಿ ನಿಗದಿಪಡಿಸಿದ್ದ ಶುಲ್ಕ ಸದ್ಯಕ್ಕೆ ಅನ್ವಯವಿಲ್ಲ

## ದುಬಾರಿ ಶುಲ್ಕದ ಶೇ.75ರಷ್ಟನ್ನು ವಿದ್ಯಾರ್ಥಿಗಳು ಪಾವತಿಸಬೇಕು: ಹೈಕೋರ್ಟ್ ಮಧ್ಯಂತರ ಆದೇಶ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯದಲ್ಲಿನ ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿ ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಆಯಾ ವಿಶ್ವವಿದ್ಯಾಲಯಗಳು ನಿಗದಿಪಡಿಸಿರುವ ಒಟ್ಟು ಶುಲ್ಕ ಪ್ರಮಾಣದ ಪೈಕಿ ಶೇ.75ರಷ್ಟು ಶುಲ್ಕವನ್ನು ಪ್ರಸಕ್ತ ಸಾಲಿಗೆ ತಾತ್ಕಾಲಿಕವಾಗಿ ಪಾವತಿಸಬೇಕಿದೆ.



ಈ ಸಂಬಂಧ ರಾಜ್ಯ ಹೈಕೋರ್ಟ್ ಬುಧವಾರ ಮಧ್ಯಂತರ ಆದೇಶ ಹೊರಡಿಸಿದ್ದು, ಅರ್ಜಿಗಳ ಕುರಿತು ನ್ಯಾಯಾಲಯವು ಹೊರಡಿಸುವ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ ಎಂದು ಸ್ಪಷ್ಟಪಡಿಸಲಾಗಿದೆ.

ಖಾಸಗಿ ಕಾಲೇಜುಗಳಲ್ಲಿ ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕೆ ಕಳೆದ ಸಾಲಿನಲ್ಲಿನಿಗದಿಪಡಿಸಿದ್ದಒಟ್ಟುಶುಲ್ಕದಪ್ರಮಾಣವನ್ನು ಶೇ.8ರಷ್ಟು ಹೆಚ್ಚಿಸಿದ್ದ ನಿವೃತ್ತ ನ್ಯಾಯಮೂರ್ತಿ ಶೈಲೇಂದ್ರ ಕುಮಾರ್ ನೇತೃತ್ವದ ಶುಲ್ಕ ನಿಯಂತ್ರಣ ಸಮಿತಿಯ ಕ್ರಮ ಪ್ರಶ್ನಿಸಿ ಮೈಸೂರಿನ ಜೆ.ಎಸ್. ಆಕಾಡೆಮಿ ಆಫ್ ಹೈಯರ್ ಎಜುಕೇಷನ್ ಆ್ಯಂಡ್ ರಿಸರ್ಚ್ ಯೂನಿವರ್ಸಿಟಿ ಹಾಗೂ ಇತರೆ ನಾಲ್ಕು ಡೀಮ್ಡ್ ವಿಶ್ವವಿದ್ಯಾಲಯಗಳು ಹೈಕೋರ್ಟ್‌ಗೆ ತಕರಾರು ಅರ್ಜಿ ಸಲ್ಲಿಸಿದ್ದವು.

ಶುಲ್ಕ ಪ್ರಮಾಣವನ್ನು ಶೇ.40ರಷ್ಟು ಹೆಚ್ಚಳ ಮಾಡುವಂತೆ ತಾವು ತಿಳಿಸಿದ್ದರೂ, ಅದನ್ನು ಬದಿಗೊತ್ತಿ ಶುಲ್ಕ ನಿಯಂತ್ರಣ ಸಮಿತಿಯು ಕೇವಲ ಶೇ.8ರಷ್ಟು ಶುಲ್ಕ ಹೆಚ್ಚಿಸಿರುವುದು ನ್ಯಾಯ ಸಮ್ಮತವಾಗಿಲ್ಲ, ಮೇಲಾಗಿ ತಮ್ಮ ವಿಶ್ವವಿದ್ಯಾಲಯದ ಶುಲ್ಕ ನಿಗದಿ ಸಮಿತಿಯು ತನ್ನದೇ ಆದ ಶುಲ್ಕ ಪ್ರಮಾಣ ನಿಗದಿ ಪಡಿಸಿದ್ದು, ಅಷ್ಟನ್ನೂ ವಿದ್ಯಾರ್ಥಿಗಳಿಂದ ಪಡೆಯಲು ಅನುಮತಿ ನೀಡಿ ಆದೇಶಿಸಬೇಕು ಎಂದು ನ್ಯಾಯಾಲ ಯವನ್ನು ವಿಶ್ವವಿದ್ಯಾಲಯಗಳು ಕೋರಿದ್ದವು.

ಬುಧವಾರ ಈ ಅರ್ಜಿ ವಿಚಾರಣೆ ನಡೆಸಿದ ನಾಯಮೂರ್ತಿ ಎ.ಎಸ್.ಬೋಪಣ್ಣ ಮತ್ತು ನ್ಯಾಯಮೂರ್ತಿ ಮೊಹಮ್ಮದ್ ನವಾಜ್ ಅವರಿದ್ದ ವಿಭಾಗೀಯ ನ್ಯಾಯಪೀಠ, ವಿಶ್ವವಿದ್ಯಾಲಯಗಳು ತಮ್ಮ ಶುಲ್ಕ ನಿಗದಿ ಸಮಿತಿ ನಿಗದಿಪಡಿಸಿರುವ ಒಟ್ಟು ಶುಲ್ಕ ಪ್ರಮಾಣದ ಪೈಕಿ ಶೇ.75ರಷ್ಟು ಶುಲ್ಕವನ್ನು ತಮ್ಮಲ್ಲಿನ ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಕೋರ್ಸ್‌ಗಳಿಗೆಪ್ರವೇಶಪಡೆಯುವವಿದ್ಯಾರ್ಥಿಗಳಿಂದ ತಾತ್ಕಾಲಿಕವಾಗಿ ಪಾವತಿಸಿಕೊಳ್ಳಬಹುದು ಎಂದು ಮಧ್ಯಂತರ ಆದೇಶ ಮಾಡಿದೆ.

ಅಲ್ಲದೆ, ಶೇ.75ರಷ್ಟು ಶುಲ್ಕ ಪಾವತಿಸಿಕೊಳ್ಳುವುದು ಅರ್ಜಿಗಳ ಕುರಿತು ನ್ಯಾಯಾಲಯವು ಹೊರಡಿಸುವ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ. ಡೀಮ್ಡ್ ಯೂನಿವರ್ಸಿಟಿಗಳು ನಿಗದಿಪಡಿಸಿರುವ ಶುಲ್ಕ ಹೆಚ್ಚಳವಾಗಿದೆ ಎಂದು ನ್ಯಾಯಾಲಯವು ತೀರ್ಪು ನೀಡಿದರೆ, ಈ ಸಾಲಿಗೆ ವಿದ್ಯಾರ್ಥಿಗಳಿಂದ ಹೆಚ್ಚುವರಿಯಾಗಿ ಪಡೆದ ಶುಲ್ಕವನ್ನು ಮುಂದಿನ ಸಾಲಿಗೆ ಹೊಂದಾಣಿಕೆ ಮಾಡಬೇಕು. ಹಾಗೆಯೇ, ಒಂದೊಮ್ಮೆ ಡೀಮ್ಡ್ ವಿಶ್ವವಿದ್ಯಾಲಯಗಳು ನಿಗದಿಪಡಿಸಿರುವ ಶುಲ್ಕವು ನ್ಯಾಯಸಮ್ಮತವಾಗಿದೆ ಎಂದು ಆದೇಶಿಸಿದರೆ, ಉಳಿದ ಶೇ.25ರಷ್ಟು ಹಣವನ್ನು ಪಾವತಿಸುವುದಾಗಿ ದೃಢೀಕರಿಸಿದ ಮುಚ್ಚಳಿಕೆಗಳನ್ನು ವಿದ್ಯಾರ್ಥಿಗಳಿಂದ ವಿಶ್ವವಿದ್ಯಾಲಯಗಳು ಪಡೆಯಬೇಕು ಎಂದು ಮಧ್ಯಂತರ ಆದೇಶದಲ್ಲಿ ನ್ಯಾಯಪೀಠ ಸ್ಪಷ್ಟಪಡಿಸಿದೆ.

ಮುಂಜಾನೆ ಮಾತು
ಕಲಿಯುವುದಕ್ಕೆ ಹೊತ್ತು ಗೊತ್ತುಗಳ ಪರಿವೆಯಿರಬಾರದು. ಎಲ್ಲ ವಯಸ್ಸೂ ಕಲಿಯಲು ಯೋಗ್ಯ ವಯಸ್ಸೇ. ಮನಸ್ಸು ಮತ್ತು ಮಾರ್ಗಗಳು ಮುಖ್ಯ.

ವಿಜಯವಾಣಿ
ಕನ್ನಡಿಗರ ಧ್ವನಿ
ನಂ.1* ಕನ್ನಡ ದಿನಪತ್ರಿಕೆ

CENTRAL LIBRARY



ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ VIJAYAVANI ● MANGALURU ಮಂಗಳೂರು ● ಸಂಪುಟ 7 ● ಸಂಚಿಕೆ 124
vijayavani.net ಇ-ಪೇಪರ್: epapervijayavani.in VVani4U @VVANI4U vijayavaninews@gmail.com ಸಹಾಯವಾಣಿ: 8884411682 2 ಆಗಸ್ಟ್ 2018 | ಗುರುವಾರ

## ದೇಶದಲ್ಲಿ 277 ನಕಲಿ ಇಂಜಿನಿಯರಿಂಗ್ ಕಾಲೇಜು

ಇತ್ತೀಚಿನ ವರ್ಷಗಳಲ್ಲಿ ಇಂಜಿನಿಯರ್‌ಗಳಿಗೆ ಬೇಡಿಕೆ ಹೆಚ್ಚಾದ ಹಿನ್ನೆಲೆ ದೇಶದೆಲ್ಲೆಡೆ ಹೆಚ್ಚಿನ ಸಂಖ್ಯೆಯಲ್ಲಿ ಇಂಜಿನಿಯರಿಂಗ್ ಕಾಲೇಜುಗಳು ಆರಂಭಗೊಂಡಿವೆ. ಆದರೆ, ಈ ಪೈಕಿ 277 ನಕಲಿ ಇಂಜಿನಿಯರಿಂಗ್ ಕಾಲೇಜುಗಳಿದ್ದು, ಈ ಪಟ್ಟಿಯಲ್ಲಿ ರಾಜಧಾನಿ ದಿಲ್ಲಿ ಮೊದಲ ಸ್ಥಾನದಲ್ಲಿದೆ ಎನ್ನುವುದು ದುರಂತ. 23 ನಕಲಿ ಇಂಜಿನಿಯರಿಂಗ್ ಕಾಲೇಜುಗಳೊಂದಿಗೆ ಕರ್ನಾಟಕ 17ನೇ ಸ್ಥಾನದಲ್ಲಿದೆ ಎಂಬ ಮಾಹಿತಿಯನ್ನು ಲೋಕಸಭೆಯಲ್ಲಿ ಕೇಂದ್ರ ಸರ್ಕಾರ ನೀಡಿದೆ.

### ಮೊದಲ 10 ರಾಜ್ಯಗಳು ಮತ್ತು ಅವುಗಳು ಹೊಂದಿರುವ ನಕಲಿ ಕಾಲೇಜುಗಳು

| ಕ್ರ.ಸಂ. | ರಾಜ್ಯ | ಸಂಖ್ಯೆ |
|---|---|---|
| 1. | ದಿಲ್ಲಿ | 66 |
| 2. | ತೆಲಂಗಾಣ | 35 |
| 3. | ಪಶ್ಚಿಮ ಬಂಗಾಳ | 27 |
| 4. | ಕರ್ನಾಟಕ | 23 |
| 5. | ಉತ್ತರ ಪ್ರದೇಶ | 22 |
| 6. | ಹರ್ಯಾಣ | 18 |
| 7. | ಬಿಹಾರ | 17 |
| 8. | ಮಹಾರಾಷ್ಟ್ರ | 16 |
| 9. | ತಮಿಳುನಾಡು | 11 |
| 10. | ಗುಜರಾತ್ | 8 |







